ಅ) ಖರ್ಚಿನ ಪ್ರಶ್ನೆ ಉದ್ಭವಿಸುವುದಿಲ್ಲ, ಕಾಮಗಾರಿ ಇದುವರೆವಿಗೆ ಯಾವ ಅನುಮೋದಿತ ಕಾರ್ಯಗಳಲ್ಲೂ ಸೇರಿಲ್ಲ.

ಇ) ಇಲ್ಲ ; ಆದರೆ ಈ ಕಾಮಗಾರಿಯು 1993-94ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುವುದು.

ವಿಷಯ : ಗುಬ್ಬಿ ನಗರದ ಮುನ್ಸೀಫ್ ಕೋರ್ಟ್ ಕಟ್ಟಡದ ಕಾಂಪೌಂಡು ಕಟ್ಟುವ ಬಗ್ಗೆ.

Q : 1633

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ನಗರದ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಕಟ್ಟಡದ ಕಾಂಪೌಂಡು ಕಟ್ಟುವ ಕಾರ್ಯ ಪೂರ್ಣವಾಗಿದೆಯೆ ;

ಆ) ಕಾಂಪೌಂಡು ಇಲ್ಲದೆ ನ್ಯಾಯಾಲಯದ ಆವರಣದಲ್ಲಿ ಗಲೀಜು ಆಗುತ್ತಿರುವುದು ನಿಜವಲ್ಲವೆ ; ಹಾಗಾದರೆ ಕಾಂಪೌಂಡು ಯಾವಾಗ ಕಟ್ಟಿಸಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಹೌದು. ಆದಷ್ಟು ಬೇಗ ಕಾಂಪೌಂಡನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ : ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಪವರ್‌ಲೂಮ್‌ಗಳಿಗೆ ವಿದ್ಯುತ್ ಸರಬರಾಜು.

Q : 1632

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ತಾಲ್ಲೂಕು ಕಸಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಕೆಹೆಚ್‌ಡಿಸಿ ನೆರವಿನಿಂದ ಪವರ್‌ಲೂಮ್‌ಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪವರ್‌ಲೂಮ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ವೇಳೆಯನ್ನು ನಿಗದಿ ಮಾಡಲಾಗಿದೆಯೆ? ಇದರಿಂದ ನೇಕಾರರಿಗೆ ತೊಂದರೆಯಾಗುವುದಿಲ್ಲವೇ?

ಇ) ಈ ಪ್ರದೇಶವನ್ನು ಕೈಗಾರಿಕಾ ನಗರವೆಂದು ತೀರ್ಮಾನಿಸಿ ಬೆಳಿಗ್ಗೆ 9 ರಿಂದ ರಾತ್ರಿ 8ರ ವರೆವಿಗೆ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಗೂ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಕಲ್ಲೂರು ಗ್ರಾಮಕ್ಕೆ ತುರುವೆಕೆರೆ ಸಬ್‌ಸ್ಟೇಷನ್‌ನ ತಾಳೆಕೆರೆ 11 ಕೆವಿ ಫೀಡರ್

ಮೂಲಕ ವಿದ್ಯುತ್ ಸರಬರಾಜು ಆಗುತ್ತಿದ್ದು, ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ವಹಿಸಲಾಗುತ್ತಿರುವ ದಿನವಹಿ 6 ಗಂಟೆಗಳ ಅವಧಿಯ ನಿಯಮಿತ ಲೋಡ್ ಶೆಡ್ಡಿಂಗ್ ತಾಳೇಕೆರೆ 11 ಕೆವಿ ಫೀಡರಿಗೂ ಅನ್ವಯಿಸುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ. ವಿದ್ಯುತ್ ಗ್ರಾಹಕರ ಸಹಕಾರ ಅತ್ಯಗತ್ಯವಾಗಿದೆ.

ಇ) ತಾಳೇಕೆರೆ 11 ಕೆವಿ ಫೀಡರ್‌ನಲ್ಲಿ ಕೈಗಾರಿಕೆಗಳ ಲೋಡ್ ಶೇಕಡ 60ಕ್ಕಿಂತ ಕಡಿಮೆ ಇರುವುದರಿಂದ ನಿಯಮಿತ ಲೋಡ್ ಶೆಡ್ಡಿಂಗ್‌ನಿಂದ ವಿನಾಯಿತಿ ನೀಡಲು ಸಾಧ್ಯವಿಲ್ಲ.

ಈ) ಪ್ರಶ್ನೆಯು (ಇ) ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ : ಶಿಗ್ಗಾಂವ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ ಅಪಘಾತಗಳ ಸಂಖ್ಯೆ.

Q : 1638

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ ಮೇಲೆ ಶ್ಯಾಡಂಬಿ - ವ- ತಡಹಳ್ಳಿ ಕ್ರಾಸ್ ಹತ್ತಿರ ಕಳೆದ 3 ವರ್ಷಗಳಲ್ಲಿ ಎಷ್ಟು ಅಪಘಾತ ಆಗಿವೆ, ಈ ಬಗ್ಗೆ ಪೋಲೀಸ್ ಸ್ಟೇಷನ್ ಕ್ರೈಮ್ ನಂಬರ್ ಮತ್ತು ಅಪರಾಧದ ಬಗ್ಗೆ ವಿವರ ನೀಡುವುದು?

ಆ) ಸದರಿ ಗ್ರಾಮಗಳ ಹತ್ತಿರ ಹೆದ್ದಾರಿ ಕರ್ವಿಂಗ್ (ಡೊಂಕು) ಇದ್ದು ಗಿಡ ಮರಗಳು ಬೆಳೆದಿದ್ದು ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಅಪಘಾತಗಳನ್ನು ತಡೆಗಟ್ಟಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಶ್ಯಾಡಂಬಿ ವ ತಡಹಳ್ಳಿ ಕ್ರಾಸ್ ಹತ್ತಿರ ಆದ ಅಪಘಾತಗಳ ಸಂಖ್ಯೆ ಈ ಕೆಳಗಿನಂತಿವೆ :-

1990	-	12 ಪ್ರಕರಣಗಳು
1991	-	14 ಪ್ರಕರಣಗಳು
1992	-	13 ಪ್ರಕರಣಗಳು

ಕ್ರೈಮ್ ನಂಬರ್ ಮತ್ತು ಇತರ ವಿವರಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಆ) ಹೆದ್ದಾರಿ ತಿರುವಿನಲ್ಲಿ ಮರಗಳು ಬೆಳೆದಿದ್ದು ನಿಜ. ಆದರೆ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿಲ್ಲ. ಅವುಗಳ ಟೊಂಗೆಗಳನ್ನು ರಸ್ತೆಯ ಮೇಲೆ ಬರದ ಹಾಗೆ ಕಡಿದು ಹಾಕಲಾಗಿದೆ. ಮತ್ತು ರಸ್ತೆಯಿಂದ 5.5 ಮಿಟರ್ ಎತ್ತರದೊಳಗೆ ಬರತಕ್ಕ ಗಿಡ/ಗಳ/ ಟೊಂಗೆಗಳನ್ನು ಕಡಿದುಹಾಕಲಾಗಿದೆ.

ಇ) ಅಪಘಾತಗಳನ್ನು ತಡೆಗಟ್ಟಲು ಮೇಲೆ ತಿಳಿಸಿದ ಕ್ರಮಗಳ ಜೊತೆಗೆ ರಾತ್ರಿಯ ವೇಳೆಯಲ್ಲಿ ವಾಹನ ಚಾಲಕರಿಗೆ ಕಾಣುವ ಹಾಗೆ ಗಿಡಮರಗಳಿಗೆ ಸುಣ್ಣ ಮತ್ತು ಬಣ್ಣವನ್ನು ಹಚ್ಚಲಾಗಿದೆ. ಎಚ್ಚರಿಕೆ ಹಾಗೂ ಸೂಚನಾ ಫಲಕಗಳನ್ನು ಸಹ ಹಾಕಲಾಗಿದೆ.